Mr. SPEAKER.—The question is:

"That after Schedule IV, the new Schedule V as recommended by the Select Committee and as amended be added."

The motion was adopted.

Schedule V as amended was added to the Bill.

Motion to pass

Sri T. MARIAPPA.—Sir, I beg to move:

"That the Mysore Sales Tax Bill, 1957, as amended, be passed."

Mr. SPEAKER.—The question is:

"That the Mysore Sales Tax Bill, 1957, as amended, be passed."

The motion was adopted.

MYSORE IRRIGATION (LEVY OF BETTERMENT CONTRIBUTION AND WATER RATE) BILL, 1957.

Motion to consider (continued).

ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಹಿಂದಿನ ದಿನ ಮೈಸೂರು ರಾಜ್ಯದ ನೀರಾವರಿಯ (ಮೇಲ್ತಾಟು ಅಂಶದಾನವನ್ನೂ ಮತ್ತು ನೀರು ನರದಿಯನ್ನೂ ವಿಧಿಸುವುದರ ಸಂಬಂಧದ) 1957 ನೆಯ ಇಸವಿಯ ವಿಧೇಯಕದಮೇಲೆ ವಿರೋಧಪಕ್ಷದ ನಾಯಕರಾದ ಶ್ರೀವರ್ಮಾ ಕೆ. ಕೆಂಚ್ಪನವರ ಅಭಿಪ್ರಾಯವನ್ನು ಪಮರ್ಶಿಸುತ್ತಾ ಇದ್ದೆ. ಹಿರಿಯೂರಿನ ಮಾನ್ಯ ಸದಸ್ಯರು ಈ ರೀತಿ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟನ್ನು ವಸೂಲು ಮಾಡುವುದು ಒಂದು ಶೋಷಣೆ ಆಗುತ್ತದೆ, ಇದು ಗಾಂಧೀಜಿ ಭಕ್ತರಾದ ಕಾಂಗ್ರೆಸ್ಸಿನವರು ಈ ಸಭೆಯ ಮುಂದೆ ಮಂಡಿಸಿರುವುದು ತಮಗೆ ಆಶ್ಚರ್ಯವನ್ನುಂಟುಮಾಡುತ್ತಿದೆ ಎಂದು ಹೇಳಿದರು. ವ್ಯವಸಾಯವನ್ನೇ ನಂಬಿರುವ ಜನರ ಅನುಕೂಲಕ್ಕಾಗಿ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲಲ್ಲಿ ಸಣ್ಣ ಪುಟ್ಟ ನೀರಾವರಿ ಕಾಮಗಾರಿಗಳನ್ನೂ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನೂ ಕೈಗೆಕೊಳ್ಳಬೇಕು, ಮತ್ತು ಅದರಿಂದ ಅವರ ಜೀವನ ಸುರಕ್ಷಿತವಾಗುತ್ತದೆ ಎಂಬ ವಿಚಾರವನ್ನು ನಾನು ಪ್ರಸ್ತಾಪಿಸಿದ್ದೆ. ಈ ರೀತಿ ಬೆಟರ್‌ಮೆಂಟ್ ಫೀಯನ್ನು ವಸೂಲು ಮಾಡುವುದು ಮೈಸೂರಿನಲ್ಲಿ ಹೊಸದಲ್ಲ. 19ನೆಯ ಶತಮಾನದಿಂದಲೂ ಕೂಡ ಇದನ್ನು ವಸೂಲು ಮಾಡುತ್ತಿದ್ದಾರೆ ಎಂದು ಒತ್ತಿ ಹೇಳಿದೆ. ಬೊಂಬಾಯಿಯಲ್ಲೂ ಮತ್ತೆ ಮದರಾಸಿನಲ್ಲೂ ಕೂಡ ಜಮೀನಿನ ಬೆಲೆ ಎಷ್ಟರ ಮಟ್ಟಿಗೆ ಹೆಚ್ಚುತ್ತಿದೆಯೋ ಅದನ್ನೇ ಅವಲಂಬಿಸಿ ಅರ್ಧಕ್ಕೆ ಮೀರದಂತೆ ಈ ಬೆಟರ್‌ಮೆಂಟ್ ಫೀಯನ್ನು ಅಲ್ಲಿ ವಸೂಲು ಮಾಡುತ್ತಿದ್ದಾರೆ. ಸಂಸ್ಥಾನದ ಪುನರ್‌ವಿಂಗಡಣೆಯಾದ ಮೇಲೆ ನಾನಾ ಪ್ರದೇಶಗಳು ಒಂದಾಗಿ ಹೊಸ ಮೈಸೂರು ರಾಜ್ಯ ಸ್ಥಾಪನೆಯಾದ ಮೇಲೆ ಈ ಹೊಸ ಮೈಸೂರು ರಾಜ್ಯಕ್ಕೆ ಅನ್ವಯವಾಗುವಂತೆ ಒಂದು ಕಾನೂನನ್ನು ಮಾಡಬೇಕಾದ ಆವಶ್ಯಕತೆ ಬಂತು. ಆದ್ದರಿಂದ ಎಲ್ಲಾ ಭಾಗಗಳಲ್ಲಿರುವ ಪದ್ಧತಿಯನ್ನು ಪರಿಶೀಲನೆಮಾಡಿ ಸಾಮಾನ್ಯವಾಗಿ ಎಲ್ಲರ ಒಪ್ಪಿಗೆಯನ್ನೂ ಪಡೆಯಬೇಕಾದ ರೀತಿಯಲ್ಲಿ ಈ ಮಸೂದೆಯನ್ನು ಸರ್ಕಾರದವರು ಸಭೆಯ ಮುಂದೆ ಈಗ ಮಂಡಿಸಿದ್ದಾರೆ.

ಮೊನ್ನೆಯಿಂದೀಚೆಗೆ ಇದೇ ಮಸೂದೆ ಕನ್ನಡದಲ್ಲಿ ತರ್ಜುಮೆಯಾದ ಮೇಲೆ ನಮ್ಮ ಹಸ್ತಗತವಾಗಿದೆ. ಈ ಸಭೆಯಲ್ಲಿ ಚರ್ಚೆಯಾಗುವಾಗ ಇಲ್ಲಿ ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಬೆರೆಸಿ ಮಾತನಾಡುವುದು ಒಂದು ರೂಢಿ ಬಂದಿದೆ. ಅದನ್ನು ಸಾಧ್ಯವಾದಮಟ್ಟಿಗೂ ಬಿಡುವುದು ಮೇಲು ಎಂದು ತಾವೇ ಅಪ್ಪಣೆ ಕೊಡಿಸಿದ್ದೀರಿ. ನನಗಾದರೂ ತಾವು ಹೇಳಿದ್ದು ಸರಿಯಾದ ಮಾತು ಎಂದು ತೋರಿತು. ಸಾಧ್ಯವಾದಮಟ್ಟಿಗೂ ಕೂಡ ಆ ರೀತಿ ಭಾಷಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಕನ್ನಡದಲ್ಲರತಕ್ಕ ಕರಡು ಮಸೂದೆಯನ್ನು ಓದುವುದಕ್ಕೆ ಪ್ರಯತ್ನಪಟ್ಟೆ. ಕನ್ನಡ ಮಸೂದೆಯನ್ನು ಕೈಯಲ್ಲಿ ಹಿಡಿದು ಪಕ್ಕದಲ್ಲಿಯೇ ಇಂಗ್ಲಿಷ್ ಕಾಪಿಯನ್ನೂ ಇಟ್ಟು ಒಂದೊಂದು ಖಟಂ ಅನ್ನೂ ತಾಳೆ ಮಾಡಿದರೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇದರಲ್ಲಿ ಬಳಸಿರುವ ಭಾಷೆ ನಮ್ಮ ದೇಶದಲ್ಲಿ ಬಳಸುವ ಭಾಷೆಯಲ್ಲ. ಅದು ಬೇರೆ ಪ್ರಾಂತ್ಯಗಳಲ್ಲಿ ಬಳಸುವ ಭಾಷೆಯಾಗಿರಬೇಕು. ಇದೇನೋ ಮದರಾಸ್, ಬೊಂಬಾಯಿ ಪ್ರಾಂತ್ಯದಲ್ಲಿ ಬಳಸುವ ಭಾಷೆಯ ಹಾಗೆ ಇರಬಹುದು ಎಂದು ಕಂಡಿತು. ಕನ್ನಡದಲ್ಲಿ ಇಂತಹ ಪದಗಳಿಲ್ಲವೆಂದು ನಾನು ಇಲ್ಲಿ ವಾದಿಸಿದರೆ ಈ ವಿಚಾರದಲ್ಲಿ ನಾನು ಸರಿಯಾಗಿ ಮಸೂದೆಯನ್ನು ಅಧ್ಯಯನ ಮಾಡಲಿಲ್ಲವೆಂದು ಇತರ ಮಾನ್ಯ ಸ್ನೇಹಿತರು ಹೇಳಬಹುದು. ಆದರೆ ಕೆಲವು ಸ್ನೇಹಿತರನ್ನು ಕೇಳಿದಾಗ ಆಶ್ಚರ್ಯವಾಯಿತು. ಇದಕ್ಕೆ ಒಂದು ಮೂಲಕಾರಣವನ್ನು ಹೇಳುತ್ತೇನೆ. ಸ್ವಾಮಿ, ಬಳಕೆಯಲ್ಲಿರುವ ಭಾಷೆ ಎಷ್ಟೋ ಇದೆ. ಕನ್ನಡ ಅಂತಹ ಬಡತನದಲ್ಲಿರತಕ್ಕ ಭಾಷೆಯಲ್ಲ. ಎರಡುಸಾವಿರ ವರ್ಷಗಳಿಂದ ಬಂದಿರತಕ್ಕ ಭಾಷೆ. ಯಾವ ವಿಚಾರವನ್ನಾದರೂ ಕೂಡ ಬೇರೆಯವರಿಗೆ ಮನದಟ್ಟಾಗುವಂತೆ ಹೇಳುವುದಕ್ಕೆ ಅವಕಾಶವಿರುವ ಭಾಷೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡಬೇಕಾದರೆ ಪದಗಳನ್ನೇ ಆಭಾಸ ಮಾಡುವ ಅವಕಾಶವಿಲ್ಲ. ಆದರೆ ಹೊಸ ಪದಗಳನ್ನು ಉಪಯೋಗಿಸಿ ಬಹಳ ಕಷ್ಟಪಟ್ಟು ತರ್ಜುಮೆ ಮಾಡಿ ಈಚೆಗೆ ನಮ್ಮ ಕೈಗೆ ಈ ಕನ್ನಡದ ಮಸೂದೆಗಳನ್ನು ಕೊಡಲಾಗಿದೆ. ಈ ಮಸೂದೆಯನ್ನು ಓದಿದರೆ ನನಗಂತೂ ಅರ್ಥವಾಗಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿರುವ ಮಸೂದೆಯನ್ನೇ ಓದೋಣವೆಂದೆನಿಸಿತು. ಎಷ್ಟು ಪ್ರಯತ್ನ ಪಟ್ಟರೂ ಏನೂ ಮಾಡಲಿಕ್ಕಾಗಲಿಲ್ಲ. ಆದರೆ ಈ ಸಭೆಯ ಕಾಲವನ್ನು ಅನಾವಶ್ಯಕವಾಗಿ ಈ ವಿಚಾರದಲ್ಲಿಯೇ ಕಳೆಯುವುದು ಸರಿಯಲ್ಲವೆಂದು ನಾನು ತಿಳಿದಿದ್ದರೂ ಮಾನ್ಯ ಸದಸ್ಯರು ಎಲ್ಲರೂ ಈ ವಿಚಾರವನ್ನು ಒಪ್ಪುವರೆಂಬ ಭರವಸೆಯುಳ್ಳವನಾಗಿದ್ದೇನೆ.

Sri B. K. PUTTARAMIYA (Channapatna).—On a point of order, Sir.

Sri A. R. BADRI NARAYAN (Thirthahalli).—The Hon'ble Member is not in his seat.

Sri B. K. PUTTARAMIYA.—The other day the Chair gave a ruling that a member can sit in any place and speak.

ಅಧ್ಯಕ್ಷರು.—ನಾನು ಆ ರೀತಿ ಹೇಳಲಿಲ್ಲ. ಯಾರಾದರೂ ತಮ್ಮ ಜಾಗವನ್ನು ಬಿಟ್ಟು ಬೇರೊಬ್ಬರ ಜಾಗದಲ್ಲಿ ಕುಳಿತುಕೊಳ್ಳಬೇಕಾದರೆ, ನನ್ನ ಅಪ್ಪಣೆ ತೆಗೆದುಕೊಂಡು ಹೋಗಿ ಕುಳಿತುಕೊಂಡರೆ ಪರವಾ ಇಲ್ಲ. ಆಗ ಯಾರು ಬೇಕಾದರೂ ಎಲ್ಲಿಯಾದರೂ ಕೂಡಬಹುದು. ಏನೂ ತೊಂದರೆಯಿಲ್ಲ. ಕೆಲವು ಸ್ಥಾನಗಳಲ್ಲಿ ಕುಳಿತಿರುವವರು ಆಗಲೇ ತಮ್ಮ ಸ್ಥಾನಗಳನ್ನು ಬದಲಾಯಿಸಿಕೊಳ್ಳಲು ನನ್ನ ಅಪ್ಪಣೆಯನ್ನು ತೆಗೆದುಕೊಂಡಿದ್ದಾರೆ.

Sri A. R. BADRI NARAYAN.—Has he taken the permission, Sir?

ಅಧ್ಯಕ್ಷರು.—ಕೆಲನ ಮುಗಿದ ಮೇಲೆ ಏನು ಪರ್ಮಿಷ್ಷ?

*ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ಶ್ರೀಮಾನ್ ಪುಟ್ಟಸ್ವಾಮಿ ಅವರು ತಮ್ಮ ಭಾಷಣದಲ್ಲಿ ಕೆಲವು ಕನ್ನಡ ಪದಗಳನ್ನು ಇಂಗ್ಲಿಷ್‌ನಿಂದ ತರ್ಜುಮೆಮಾಡಿರುವುದು ಅರ್ಥವಾಗದೆ ಇರುವ ರೀತಿಯಲ್ಲಿವೆ, ಆ ರೀತಿ ಬಳಕೆಯಲ್ಲಿಲ್ಲದ ಪದಗಳನ್ನು ಉಪಯೋಗಿಸ ಬಾರದು ಎಂದು ಹೇಳಿದರು. ಹಾಗಾದರೆ ಹಳೆಯ ಮೈಸೂರಿನವರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿರ ಬೇಕೆಂದು ಅವರ ಅಭಿಪ್ರಾಯವೇ ಅಥವಾ ಹೊಸ ಮೈಸೂರಿನ ಇತರ ಭಾಗಗಳಲ್ಲಿರುವ ಪದಗಳನ್ನೂ ಇದರಲ್ಲಿ ಜೋಡಿಸಬೇಕಾಗಿದೆ ಎಂದು ಅಭಿಪ್ರಾಯವೇ ಅಥವಾ ಇವೆರಡರಲ್ಲಿಯೂ ಇಲ್ಲದೇ ಬೇರೆ ಪದಗಳು ಇರಬೇಕು ಎಂದು ಅವರ ಅಭಿಪ್ರಾಯವೋ, ಅದನ್ನು ನಾನು ತಿಳಿಯಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಹೊರ ಭಾಗದ ಕನ್ನಡ ಪದಗಳು ನಮ್ಮ ಅನುಕರಣೆಯಲ್ಲ ಬರಬೇಕೇ ಬರ ಬಾರದೇ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ನಾನು ನಿರ್ಧಾರ ಮಾಡುವುದಕ್ಕಾಗುವುದಿಲ್ಲ. ಅವರು ಹೇಳಿದಹಾಗೆ ಮಾತನಾಡುವುದಕ್ಕಾಗುವುದಿಲ್ಲ. ಉತ್ತರ ಕರ್ಣಾಟಕದ ಮಾತುಗಳನ್ನು ಉಪಯೋಗಿಸಿ ನಭೆಯಲ್ಲ ಬಹಳ ಕಷ್ಟಕ್ಕೆ ಬಂದಿದೆ. ಈಗ ಹೊಸದಾಗಿ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಿರುವಾಗ ಹಳೆಯ ಮೈಸೂರು ಮತ್ತು ಇತರ ಪ್ರಾಂತಗಳ ಅನೇಕ ಭಾಗಗಳು ಸೇರಿವೆ. ಎಷ್ಟೋ ತರಹ ಭಾಷೆಗಳಲ್ಲಿ ಅನೇಕರು ಮಾತನಾಡುತ್ತಾರೆ. ಅನೇಕ ವೇಳೆ ಕೆಲವರಿಗೆ ಚೆನ್ನಾಗಿ ಅರ್ಥವಾಗುವುದಿಲ್ಲ. ಅದು ಉತ್ತರ ಕರ್ಣಾಟಕ ಭಾಷೆ ಇರಬಹುದು. ಮಂಗಳೂರು ಭಾಷೆಯಾಗಿರಬಹುದು. ನನಗೆ ಅರ್ಥ ವಾಗಲಿಲ್ಲವೆಂದು ಮಾನ್ಯ ನದಸ್ಯರು ಹೇಳುವಷ್ಟು ಅಧಿಕಾರವಿದೆ. ಈಗಿರುವ ಹೊಸ ಮೈಸೂರಿನ ಕನ್ನಡ ಹಳೆಯ ಮೈಸೂರಿನ ಕನ್ನಡದ ಹಾಗೆಯೇ ಇರ ಬೇಕೆಂದು ಅವರು ಹೇಳಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ —ನನ್ನ ಮಾನ್ಯ ಸ್ನೇಹಿತ ರಾದಂಥ ಶ್ರೀಮಾನ್ ಪುಟ್ಟರಾಮಯ್ಯನವರು ನನ್ನ ಭಾಷಣವನ್ನು ಸ್ವಲ್ಪ ಗಮನವಿಟ್ಟು ಕೇಳಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಚೆನ್ನಾಗಿ ಕೇಳುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಯಾವಾಗ ಕೇಳ ತ್ತಾರೆ ಗೊತ್ತೇ? ಸ್ವಲ್ಪ ಭಾಷಣ ಮೆಣಸಿನಕಾಯಿ ಆದರೆ ಕೇಳುತ್ತಾರೆ, ಅಥವಾ ಅದು ಏನಾದರೂ ನೀರನ ವಾದರೆ ಕೇಳುತ್ತಾರೆ. ಕೆಲವರು ಸಾಮಾನ್ಯವಾಗಿ ಭಾಷಣಗಳಲ್ಲಿ ಇಂತಹ ವಿಷಯಗಳೇನಾದರೂ ಬಂದಲ್ಲಿ ಗಮನಕೊಡುವುದು ಉಂಟು. ಇಂಗ್ಲಿಷ್ ನಿಂದ ಕನ್ನಡಕ್ಕೆ ತರ್ಜುಮೆ ಮಾಡುವಾಗ ಸ್ವಾಭಾವಿಕ ವಾಗಿ ತೊಂದರೆಗಳು ಬರುತ್ತವೆ. ಬಹಳ ವರ್ಷ ಗಳಿಂದಲೂ ಬೇರ್ಪಟ್ಟಿದ್ದು ಈಗ ಒಂದುಗೂಡಿದ ಕನ್ನಡ ರಾಜ್ಯದಲ್ಲಿ ಸ್ವಲ್ಪ ಕ್ಲಿಷ್ಟತೆ ತೋರುತ್ತದೆ.

Sri M. C. NARASIMHAN (Kolar Gold Field)—On a point of order, Sir, I recollect that a ruling was given some time ago in respect of a point raised by me on a similar question when discussing the Motion of Thanks, *viz.*, regarding translation. I had raised a similar objection in respect of the translation. You had given a ruling that I had better refer to the English version and not to Kannada version. Therefore is it relevant now to spend five minutes of the House on translation and other matters since a ruling has been given on a previous occasion? This is for future guidance.

Mr. SPEAKER.—I have said the same thing. In the case of Hon'ble Members who are more conversant with English and accustomed to English, it is better for them to refer to the English version. I find it myself difficult to read the Kannda version. I find it easy to refer to the English version. That is so in the case of most of us. But the point raised by the Hon'ble Member is that he found a lot of difficulty in understanding the Kannada version. He is not debarred from looking into the Kannada version. He did not look into the Kannada version only; he also looked into the English version.

Sri V. P. DEENADAYALU NAIDU (Cubbonpet).—In case of any doubt arising out of this translation, which is the authoritative and authenticated version that is to be accepted?

Mr. SPEAKER.—It is the English version.

Sri H. M. CHANNABASAPPA (Krishnarajanagara).—May I take it

(SRI H. M. CHANNABASAPPA)

that the Kannada version is not authenticated ?

Mr. SPEAKER.—The Hon'ble Member knows that it is only a translation. The original is the English version.

ಶ್ರೀ ಕೆ. ಪುಟ್ಟಸ್ವಾಮಿ.— ತಮ್ಮ ಮೂಲಕ ನನ್ನ ಸಹಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇ ನೆಂದರೆ, ನಮ್ಮಲ್ಲಿ ಅನೇಕರಿಗೆ ಇಂಗ್ಲೀಷಿನಲ್ಲಿ ಸಾಕಷ್ಟು ಮಾಹಿತಿಯಿಲ್ಲ, ತಿಳಿವಳಿಕೆಯಿಲ್ಲ, ಬಹುಭಾಗದ ಸದಸ್ಯರಿಗೆ ಕನ್ನಡ ಮಾತ್ರ ಚೆನ್ನಾಗಿ ಗೊತ್ತಿದೆ, ಇಲ್ಲಿ ಕನ್ನಡದಲ್ಲೇ ಕಾರ್ಯಕಲಾಪಗಳು ಹೆಚ್ಚಾಗಿ ನಡೆಯುತ್ತಿವೆ. ಸರ್ಕಾರದವರು ಇಂಗ್ಲೀಷಿಗೆ ಪ್ರಾಮುಖ್ಯತೆ ಕೊಟ್ಟು ಕರಡು ಮಸೂದೆಯನ್ನು ಇಂಗ್ಲೀಷಿನಲ್ಲಿ ತಯಾರಿಸುತ್ತಾರೆ, ಇಂಗ್ಲೀಷಿನಲ್ಲೇ ತಿದ್ದುಪಡಿಗಳನ್ನು ಕಳುಹಿಸಬೇಕು ; ಎಲ್ಲಾದರೂ ಭಿನ್ನಾಭಿಪ್ರಾಯ ಬಂದರೆ ಇಂಗ್ಲೀಷಿನಲ್ಲಿರುವುದನ್ನೇ ಒಪ್ಪಿಕೊಳ್ಳಬೇಕು. ಈ ರೀತಿಯ ಸಂಪ್ರದಾಯವಿದೆ. ಕೀಗಾದರೆ ಖರ್ಚು ಮಾಡಿ ಕನ್ನಡದಲ್ಲಿ ಎಲ್ಲವನ್ನೂ ಮುದ್ರಿಸಿ ಕೊಡುವುದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ. ನಾನು ಒಂದು ಪದಕ್ಕಾಗಿ ಹೆಚ್ಚು ಕಾಲ ಕಳೆಯದೆ ಮುಖ್ಯವಾದ ವಿಚಾರವನ್ನು ಗಮನಕ್ಕೆ ತರುತ್ತೇನೆ.

ಈಗ land holder ಎಂಬ ಇಂಗ್ಲೀಷ್ ಪದವಿದೆ, ಅದೇನೂ ನಮ್ಮ ಭಾಷೆಗೆ ಹೊಸದಲ್ಲ, ಅದಕ್ಕೆ ಕನ್ನಡ ಪದವಿದೆ, ಎಲ್ಲರಿಗೂ ಗೊತ್ತಿದೆ, ಹಿಡುವಳಿದಾರ, ಭೂಮಿಯ ಮಾಲೀಕ, ಜಮೀನುದಾರ ಎಂದು ಹೇಳುತ್ತಾರೆ. Owner of the land ಎಂದು ಹೇಳಿ ಭೂಮಿಯ ಹಕ್ಕಿದೆಯೆಂದು ಸೂಚಿಸುವ ಸಂದರ್ಭದಲ್ಲಿ, ಕಾನೂನು ದೃಷ್ಟಿಯಿಂದ ಟೈಟಲ್ ಇದೆ, ಸಂಪೂರ್ಣ ಸ್ವಾಮಿತ್ವವಿದೆ, ಹಕ್ಕಿದೆ ಎಂದು ಹೇಳುವಾಗ Registered occupant ಎಂದು ಹೇಳುತ್ತಾರೆ. ಈಗ ಭಾಷಾಂತರಿಸಲ್ಪಟ್ಟಿರುವ ಮಸೂದೆಯಲ್ಲಿ landholder ಎಂಬುದಕ್ಕೆ 'ಭೂಧಾರಕ' ಎಂದು ಹೇಳಿದ್ದಾರೆ ; ಧಾರಕ ಅಂದರೆ ಧರಿಸುವುದು ಎಂಬ ಅರ್ಥವಿರಬಹುದು. ನಮ್ಮಲ್ಲಿ ಒಂದು ಕಷ್ಟವಿದೆ. ಈಗ ಭಾಷೆ ಬೆಳೆಯುತ್ತಿದೆ, ನಾನಾ ಹವ್ಯಾಸದಲ್ಲಿ ತೊಡಗಿರುವ ನಮ್ಮಂಥವರಿಗೆ ಭಾಷಾ ಬೆಳವಣಿಗೆಯ ಜೊತೆಯಲ್ಲಿ ಜ್ಞಾನ ಸಂಪಾದನೆ ಮಾಡುವುದು ಕಷ್ಟ. ಸರಿಯಾದ ಜ್ಞಾನವಿರುವವರು, ಪಂಡಿತರು ಭಾಷಾಂತರಿಸಿರಬಹುದು. ಆದರೆ 'ಭೂಧಾರಕ' ಎಂಬುದು ಬೇರೆ ಅರ್ಥಕೊಡುತ್ತದೆ. ಇದನ್ನು ನಾನು ಲಘುವಾಗಿ ಭಾವನೆಮಾಡುತ್ತಿಲ್ಲ. ಇದು ಅರ್ಥವಾಗಬಹುದೋ ಏನೋ, ನನಗೆ ಕನ್ನಡದಲ್ಲಿ ಅಷ್ಟು ಪಾಂಡಿತ್ಯವಿಲ್ಲ, 'ಭೂಹಿಡುವಳಿದಾರ' ಎಂದರೆ ಯಾವ ಭಾಗದಲ್ಲಿ ಅರ್ಥವಾಗುವುದಿಲ್ಲವೋ ಗೊತ್ತಿಲ್ಲ, ಎಲ್ಲಾ ಕಡೆಯೂ ಭೂಮಿ ಮಾಲೀಕ, ಹಿಡುವಳಿದಾರ, ಭೂಮಿಯ ಒಡೆಯ ಎಂದು ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆ.

ಅಧ್ಯಕ್ಷರು.—'ಭೂಧಾರಕ' ಎಂದು ಉತ್ತರ ಕರ್ಣಾಟಕದಲ್ಲಿ ಹೇಳುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ನಮಗೆ ಅರ್ಥವಾಗುವುದಿಲ್ಲ, ಇಂಥ ಪದ ಹಾಕಿ ಎಂದು ಹೇಳಬಹುದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಏನಾದಕ್ಕೆ ಏನು ಬೇಕಾದರೂ ಹೇಳಬಹುದು, ಅದು ಕಷ್ಟವಲ್ಲ. ಇದುವರೆಗೆ ಮಾರಾಟ ತೆರಿಗೆ ಮಸೂದೆ ಚರ್ಚೆಯಾಗಿದೆ, ಒಂದೇ ನಮನೆ ಕೆಲವು ತೆರಿಗೆ ತೆಗೆದುಹಾಕಬೇಕು, ಕೆಲವು ಇರಲೇಬೇಕೆಂದರೆ ಕನಿಷ್ಠ ಅಂಶ ಇರಬೇಕು ಎಂದು ವಾದಕ್ಕೆ ಪ್ರತಿವಾದ ಮಾಡಬಹುದು. ಅದಕ್ಕೇ ನಾನು ಬಹಳ ಎಚ್ಚರಿಕೆಯಿಂದ ಹೇಳುತ್ತಿದ್ದೇನೆ. 'ಭೂಧಾರಕ' ಎಂಬ ಪದ ಇರಬಹುದು, ಅದನ್ನು ಪ್ರಶ್ನೆಮಾಡುತ್ತಿಲ್ಲ, ಅದು ಸರಿಯಲ್ಲವೆಂದು ಹೇಳಲಲ್ಲ. ಅದಕ್ಕೆ ಬದಲಾಗಿ ಬೇರೆ ಪದಗಳಿರುವಾಗ ಆ ಪದ ಬಳಸಬಹುದೆ ? ಒಂದು ಕಡೆ ಅದು ಬಳಕೆಯಲ್ಲಿರಬಹುದು, ಎಲ್ಲಾ ಕಡೆ ಬಳಕೆಯಲ್ಲಿರುವುದನ್ನು ಬಳಸಲು, ಯಾವಾಗ ಸಾಧ್ಯವಿಲ್ಲ, ಆಗ ಬೇರೆ ಪದ ಉಪಯೋಗಿಸಲು, ಅದಕ್ಕೆ ಬೇಡವೆಂದು ಹೇಳುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವ್ಯವಹಾರಿಕ ದೃಷ್ಟಿಯಿಂದ ಹಿಡುವಳಿದಾರ ಎಂಬುದು ಚೆಂದ. ಯಾವುದು ಬೇಕೋ ಅದನ್ನು ಉಪಯೋಗಿಸಲಿ.

Sri M. C. NARASIMHAN.—My point of order was not answered. How is all this relevant to the discussion on Levy of Betterment Contribution Bill ? What he is trying to make is a representation which should have been done either to the Secretary of the Legislature or to yourself in the Chambers. How is all this relevant ?

Mr. SPEAKER.— After all, this Bill is originally drafted in English : it has been translated into Kannada. The Hon'ble Member is pointing out that the Kannada version contains so many unfamiliar words. He is trying to put emphasis upon that. What he has raised is not irrelevant at all. I do not think it is irrelevant because the Kannada version is also a relevant fact so far as this discussion is concerned.

*ಶ್ರೀ ಕೆ. ಪುಟ್ಟಸ್ವಾಮಿ.—ಇನ್ನೊಮ್ಮೆ ತಮ್ಮ ಮೂಲಕ ಪ್ರಾರ್ಥನೆಮಾಡುವುದು, ಬಹಳ ನಮ್ರತೆಯಿಂದ ನನ್ನ ಸಹ ಸದಸ್ಯರಿಗೆ ಪ್ರಾರ್ಥನೆಮಾಡುವುದು, ಈ ವಿಚಾರದಲ್ಲಿ ಸ್ವಲ್ಪ ಸಹನೆ ತೋರಿ, ಏಕೆಂದರೆ ಇದು ಬಹಳ ಮುಖ್ಯವಾದ ವಿಚಾರ. ಇಂದಲ್ಲ, ನಾಳೆ ಹತ್ತಿಪ್ಪತ್ತು ವರ್ಷಗಳಲ್ಲಿ ಕನ್ನಡವೇ ಮೂಲವಾಗಿ ಕನ್ನಡವನ್ನೇ ಆಧಾರವಾಗಿಟ್ಟುಕೊಂಡು ಇಂಗ್ಲೀಷನ್ನು ಅನುಮಾನ ಪರಿಹಾರಮಾಡಿಕೊಳ್ಳುವುದಕ್ಕೆ ಮಾತ್ರ ಉಪಯೋಗಿಸುವ ಕಾಲ ಬಂದೇ ಬರುತ್ತದೆ, ಬಹಳ ದೂರವಿಲ್ಲ. ಆದ್ದರಿಂದ ನಾವು ಸರಿಯಾದ ದಾರಿಯಲ್ಲಿ ಹೋಗುತ್ತಿದ್ದೇವೆಯೆ ಎಂಬುದನ್ನು ಸ್ವಲ್ಪ ನೋಡಬೇಕು. ಪದೇ ಪದೇ ಈ ವಿಚಾರ ಚರ್ಚೆಮಾಡಿಲ್ಲ. ಎಷ್ಟೋ ವಿಚಾರ ಚರ್ಚಿತ ಚರ್ವಣವಾಗಿ ಚರ್ಚೆಮಾಡುವುದುಂಟು. ಅದಕ್ಕಾಗಿ ಸದಸ್ಯರಿಗೆ ತಮ್ಮ ಮೂಲಕ ಪ್ರಾರ್ಥನೆಮಾಡುವುದೇನೆಂದರೆ, ಇದಕ್ಕೆ ಗಮನ ಕೊಟ್ಟರೆ ಇದು ಹೆಚ್ಚು ಚರ್ಚೆಯಾಗುವುದಕ್ಕೆ ಆಸ್ಪದವಿಲ್ಲ, ಚರ್ಚಾಸ್ಪದವಾದುದಲ್ಲ.

ಇನ್ನೊಂದು ಕಡೆ "ಒಕ್ಕಲಿನ ಕಬಜೆಯಲ್ಲಿದ್ದ" ಎಂಬ ಪದಗಳನ್ನು ಉಪಯೋಗಿಸಿದ್ದಾರೆ. "ತಬಜಾ ಹಕ್ಕು ನಿವಿಷ್ಟವಾಗಿರುವ ಒತ್ತೆದಾರನು ಸೇರಿರುತ್ತಾನೆ." ಎಂದು ಒಂದು ಕಡೆ ಹೇಳಿದ್ದಾರೆ.

ಅಧ್ಯಕ್ಷರು.—ಇಂಗ್ಲೀಷ್ ವರ್ಷನ್ ಓದಿ.

Sri K. PUTTASWAMY.—Page 3:

(f)" 'landholder' or 'holder' signifies the person in whom a right to hold land is vested, whether solely on his own account, or wholly or partly in trust for another person or for a class of persons or for the public; and includes a mortgagee vested with a right to possession."

I request the House to kindly mark the last sentence. " . . . .and includes a mortgagee vested with a right to possession."

ಭೂಮಿಯನ್ನು ಭೋಗ್ಯಮಾಡಿಕೊಂಡಿರುತ್ತಾನೆ, ಆ ಭೋಗ್ಯದಾರನ ಹಕ್ಕು ಕೂಡ, ಒಳಹಕ್ಕೂ ಕೂಡ ಸೇರಿರುತ್ತದೆ. ಬಹುಶಃ ಬೇರೆ ಪ್ರಾಂತಗಳಿಂದ ಬಂದಿರುವವರಿಗೆ ಹೊಸದಾಗಿ ಉಪಯೋಗಿಸಿರುವ ಕನ್ನಡ ಪದಗಳು ಅರ್ಥವಾಗಬಹುದು, ಭೋಗ್ಯದ ಹಕ್ಕು ಅಂದರೆ mortgage with possession ಎಂದು ನಮ್ಮಲ್ಲಿ ಎಲ್ಲಾ ಕಡೆಯೂ ಗೊತ್ತಿದೆ.

ಅಧ್ಯಕ್ಷರು.—ಭೋಗ್ಯದ ಹಕ್ಕು ಅಂದರೆ ತಾವೇನು ಹೇಳುತ್ತೀರಿ ?

6 P.M.

ಶ್ರೀ ಕೆ. ಪುಟ್ಟಸ್ವಾಮಿ.—ಆಧಾರ ಮತ್ತು ಭೋಗ್ಯ ಇವೆರಡೂ 'with possession' ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲದಿರಬಹುದು. ಆದರೆ ಈಬಗ್ಗೆ ಈಗ ಇಲ್ಲಿರುವುದು ಏನೆಂದರೆ "ತಬಜಾ (ಸ್ವಾಧೀನತೆಯ) ಹಕ್ಕು ನಿವಿಷ್ಟವಾಗಿರುವ ಒತ್ತೇದಾರನು ಸೇರಿರುತ್ತಾನೆ" ಎಂದು ಹೇಳಿದೆ. ಈ ಸಂಬಂಧವಾಗಿ ಇಂಗ್ಲೀಷಿನಲ್ಲಿ ಎರಡು ಪದಗಳಿವೆ ಒಂದು Mortgage ಇನ್ನೊಂದು Pledge ಎಂದು; ನಾವು ಯಾವಾಗಲಾದರೂ ಒಂದು ಸ್ಥಿರಆಸ್ತಿಯನ್ನು ಕೊಂಡುಕೊಂಡಾಗ, ಅಥವಾ ಒತ್ತೇ ಇಟ್ಟುಕೊಂಡಾಗ ಎಂದು ಹೇಳಲಾಗಿದೆ. ಯಾವಾಗ್ಲೂ ಈ ಒತ್ತೆ ಎಂಬ ಪದ ಸ್ಥಿರ ಆಸ್ತಿಗಳ ಸಂಬಂಧವಾಗಿ ಬರುವುದಿಲ್ಲ. ಒತ್ತೆ ಎಂಬ ಪದವೇನಿದ್ದರೂ ಚರ ಆಸ್ತಿಗಳ ಸಂಬಂಧದಲ್ಲಿ ಉಪಯೋಗಿಸಲ್ಪಡುತ್ತದೆ. ಹೀಗೆ ಒತ್ತೆ ಇಟ್ಟುಕೊಳ್ಳುವುದನ್ನು ಇಂಗ್ಲೀಷಿನಲ್ಲಿ Pledge ಎಂದು ಹೇಳುತ್ತೇವೆ. ಕನ್ನಡದಲ್ಲಿ ಈ ಒತ್ತೆ ಎಂಬ ಶಬ್ದಕ್ಕೆ ಗಿರಿವಿ, ಅಡವು ಎಂದು ಹೇಳುವುದೂ ಉಂಟು. ಆದರೆ ಸ್ಥಿರ ಆಸ್ತಿಗಳನ್ನು ಮಾರ್ಟ್‌ಗೇಜ್ ಮಾಡಿಕೊಂಡರೆ ಆಗ ನಾವು ಆ ಭೂಮಿಯನ್ನು ಒತ್ತೆ ಇಟ್ಟುಕೊಂಡಿದ್ದೇವೆಂದು ಹೇಳಿದರೆ ಇದು ಸರಿಹೋಗುವುದಿಲ್ಲವೆಂಬುದು ನನ್ನ ಭಾವನೆ. ಈ ಸಂದರ್ಭದಲ್ಲಿ ನನಗೆ ಉಂಟಾಗಿರ ತಕ್ಕಂಥ ಒಂದು ಆಶ್ಚರ್ಯವೇನೆಂದರೆ ಈ ಕರಡು ಮಸೂದೆಯನ್ನು ಮಂಡಿಸಿದ ಮಾನ್ಯ ಮಂತ್ರಿಗಳು ಈ ವಿಚಾರಕ್ಕೇ ಅಷ್ಟಾಗಿ ತಮ್ಮ ಗಮನವನ್ನು ಕೊಡಲಿಲ್ಲವಲ್ಲಾ ಎಂಬುದು. ಅವರು ಮೇಲಾಗಿ ಉತ್ತಮ ಸಾಹಿತಿಗಳು ಮತ್ತು ಸ್ವತಃ ಬರಹಗಾರರು. ಈ ವಿಚಾರಗಳನ್ನು ನಾನೀಗ ಅವರ ಗಮನಕ್ಕೆ ತಂದರೆ ನಾಳೆಯಾದರೂ ನಮಗೆ ಈ ಶಬ್ದಗಳು ಅರ್ಥವಾಗುವ ಮಟ್ಟದಲ್ಲಾದರೂ ಅವರು ಇದನ್ನು ಬರೆಸುತ್ತಾರೆಂಬ ಉದ್ದೇಶದಿಂದ ಈ ವಿಚಾರಗಳನ್ನು ನಾನೀಗ ಪ್ರಸ್ತಾಪ ಮಾಡುತ್ತಿದ್ದೇನೆ. ಆ ಬಗ್ಗೆ ಉದಾಹರಣೆಯ ರೂಪದಲ್ಲಿ ಈ ಒಂದೆರಡು ಪದಗಳನ್ನು ಹೇಳಿದೆನು. ಆದರೆ ಪುನಃ ನಾನಿನ್ನು ಈ ವಿಚಾರವನ್ನು ಪ್ರಸ್ತಾಪಮಾಡುವುದಿಲ್ಲ. ಈ ಕನ್ನಡ ಪ್ರತಿಯನ್ನು ಯಾರು ಬೇಕಾದರೂ ಓದಿ ನೋಡಲಿ; ಆಗ ಅವರಿಗೆ ಈ ಶಬ್ದಗಳಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬುದು ಆಗ ಅವರವರ ಮನಸ್ಸಿಗೇ ವೇದ್ಯವಾಗುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಸ್ವಾಮಿ, ಅಧ್ಯಕ್ಷರೇ ನಮಗೆ ಆ ಕನ್ನಡದಲ್ಲಿರತಕ್ಕ ಮಸೂದೆಗಳ ಕಾಪಿ ಬಂದಿಲ್ಲ. ಆದರೆ ಈಗ ಮಾತನಾಡುತ್ತಿರುವ ಸದಸ್ಯರೇನು ಈ ಮಸೂದೆಯನ್ನು ವಿರೋಧಿಸುತ್ತಿದ್ದಾರೋ ಅನುಮೋದಿಸುತ್ತಿದ್ದಾರೋ ಅದೇ ತಿಳಿಯುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಈ ಮಸೂದೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಇಲ್ಲಿ ಇನ್ನೊಂದು ವಿಷಯ ಏನೆಂದರೆ, "ಭೂಮಿಯನ್ನು ಒಪ್ಪಿಸಿಕೊಟ್ಟ..." ಸದರಿ ಒಪ್ಪಿಸಿಕೊಡೋಣವು ಈ ಕೆಳಗಿನ ಶರತ್ತುಗಳಿಗೊಳಪಟ್ಟಿರತಕ್ಕದ್ದು" ಎಂದು ತಿಳಿಸಿದೆ ಇಲ್ಲಿ "ಒಪ್ಪಿಸಿಕೊಟ್ಟು" ಮತ್ತು "ಒಪ್ಪಿಸಿಕೊಡೋಣವು" ಎಂಬ ಎರಡು ಪದಗಳು ಬಂದಿವೆ. ಇವೆರಡೂ ಕ್ರಿಯಾಪದಗಳೇ. ಹೀಗೆ ಹೇಳುತ್ತಾ ಹೋದರೆ ಒಂದಲ್ಲ ಎರಡಲ್ಲ, ಪ್ರತಿಯೊಂದು ಕಲಂನಲ್ಲೂ ಹೀಗೆಯೇ ಹೇಳುತ್ತಾ ಹೋಗಬಹುದು. ಆದರೆ ಇದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇರಬಹುದು. ಇನ್ನು ಈ ಬಗ್ಗೆ ನಾನು ಹೆಚ್ಚು ಚರ್ಚೆಮಾಡದೆ ಸರ್ಕಾರದಲ್ಲಿ ಒಂದು ವಿಚಾರವನ್ನು ಬಹಳ ನಮ್ರತೆಯಿಂದ ಅರಿಕೆಮಾಡಿಕೊಳ್ಳುತ್ತೇನೆ. ಅದೇನೆಂದರೆ ಈ ವಿಚಾರದಲ್ಲಿ ನಾವು ಯಾವ ಪದಗಳು ಸರಿ ಯಾವುದು ತಪ್ಪು ಎಂಬುದನ್ನು ನಿರ್ಧರಿಸಲು ಒಂದು ಪಂಡಿತೋತ್ತಮರ ಸಭೆಯನ್ನು ಸೇರಿಸಿ ಈ ಬಗ್ಗೆ ನಿರ್ದಿಷ್ಟ ಪದಗಳನ್ನು ಗೊತ್ತುಮಾಡತಕ್ಕದ್ದು ಅತ್ಯಗತ್ಯ. ಕೇವಲ ಒಂದು ಸಾಮಾನ್ಯ ತರ್ಜುಮೆ ವಿಷಯದಲ್ಲೂ 'notified under this Act' ಎಂಬುದಕ್ಕೆ "ಅಧಿಸೂಚನೆ" "ಅಧಿನೇಮದ ಅನ್ವಯ" ಎಂದು ಬರೆಯಲಾಗಿದೆ. ಇನ್ನಾದರೂ ಕೂಡ ನಮ್ಮ ಕಾನೂನುಗಳಲ್ಲಿ ಬರತಕ್ಕಂಥ ಇಂಗ್ಲೀಷ್ ಪದಗಳಿಗೆ ಸರಿಯಾದ ಕನ್ನಡ ಪದಗಳನ್ನು ಬಳಸಬೇಕು. ಇಂಥ ಇಂಗ್ಲೀಷ್ ಪದಕ್ಕೆ ಇಂಥ ಕನ್ನಡ ಪದ ಎಂದು ಖಚಿತವಾಗಿ ತೀರ್ಮಾನ ಮಾಡಿ ಮಸೂದೆಯಲ್ಲಿ ಅವೇ ಪದಗಳನ್ನು ಬಳಸಿಕೊಳ್ಳಬೇಕು. ಒಂದು ಪದಕ್ಕೆ ಒಂದೇ ಅರ್ಥ ಬರುವಂತೆ ಆಗಬೇಕು. ಕೋರ್ಟು ವ್ಯವಹಾರದಲ್ಲಿ ಕೂಡ ಒಂದು ಪದಕ್ಕೆ ಒಂದು ನಿರ್ದಿಷ್ಟವಾದ ಅರ್ಥ ಇರಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಭಾಷೆ ಬೆಳೆಯುವುದಿಲ್ಲ. ಅನೇಕ ಪದಗಳ ಒಂದು ಲೀಗಲ್ ಡಿಕ್ಷನರಿ ಮಾಡಬೇಕು ಎಂದು ನಾನು ಏನಂತಿಮಾಡಿಕೊಳ್ಳುತ್ತೇನೆ. ಬೇರೆ ವಿಚಾರಗಳನ್ನು ನಾಳೆಯ ದಿವಸ ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಎತ್ತಿದ ವಿಚಾರ ಬಹಳ ಮಹತ್ವದ್ದಾಗಿದೆ. ಈ ಬಗ್ಗೆ ಹಿಂದಕ್ಕೆ ಲೋಕ ಸಭೆಯಲ್ಲಿ ಒಂದು ಸಮಿತಿಯನ್ನು ನೇಮಿಸ

(ಅಧ್ಯಕ್ಷರು)

ಲಾಗಿತ್ತು. ಆ ಸಮಿತಿಯವರು ಇಂಗ್ಲೀಷ್‌ಪದಗಳಿಗೆ ಹಿಂದೀ ಶಬ್ದಗಳನ್ನು ಸಂಗ್ರಹಿಸಿದ್ದಾರೆ. ಪ್ರತಿಯೊಂದು ಪ್ರಾಂತದಲ್ಲಿರುವ ಭಾಷೆಯಲ್ಲಿಯೂ ಕೂಡ ಆ ಪದಗಳನ್ನು ಉಪಯೋಗಿಸಲು ಬರುವಂಥ ಸಮಾನ ಶಬ್ದಗಳು ಆಗಿರಬೇಕೆಂದು ಹಾಗೆ ಮಾಡಿದ್ದಾರೆ. ಭಾಷಾಂತರ ಮಾಡುವುದಕ್ಕೆ ಇಂಥ ಶಬ್ದಸಂಗ್ರಹ ಬಹಳ ಉಪಯೋಗವಾಗುತ್ತದೆ. ಇದೇ ವಿಷಯ ಹಿಂದಕ್ಕೆ ಮುಂಬಯಿ ಅಸೆಂಬ್ಲಿಯಲ್ಲಿಯೂ ಹೊರಟಿತ್ತು. ಆ ಕಾಲಕ್ಕೆ ಪಾರ್ಲಮೆಂಟಿನಲ್ಲಿ ಏನು ಮಾಡಿದ್ದಾರೆಯೋ ಅದನ್ನೇ ನೋಡಿಕೊಂಡು ಅದರಂತೆಯೇ ಕೆಲಸ ಮಾಡಬೇಕೆಂದು ಒಂದು ಕಮಿಟಿಯನ್ನು ನಿಯಮಿಸಬೇಕೆಂದು ಮಾಡಿದರು. ಮರಾಠಿ, ಗುಜರಾತಿ, ಕನ್ನಡ ಭಾಷೆಗಳಲ್ಲಿ ಒಂದೇ ರೀತಿಯಾಗಿ ಸಮಾನ ಶಬ್ದಗಳನ್ನು ಉಪಯೋಗಿಸಲು ಬರುವಂತೆ ಶಬ್ದಸಂಗ್ರಹವನ್ನು ತಯಾರು ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕಮಾಡಿದರು. ಈ ಕೆಲಸ ಅಲ್ಲಿ ಪೂರ್ತಿಯಾಗಿ ಆದಂತೆ ಕಾಣುವುದಿಲ್ಲ. ಈಗ ಇಲ್ಲಿ ಈ ಕೆಲಸವನ್ನು ಸರಕಾರಕ್ಕೆ ಒಪ್ಪಿಸದೆ ಈ ಮಹಾಸಭೆಯ ಸದಸ್ಯರನ್ನೊಳಗೊಂಡ ಒಂದು ಕಮಿಟಿಯನ್ನು ನಿಯಮಿಸಬೇಕು. ಈ ಸಮಿತಿಯು ಒಂದು ಶಬ್ದಸಂಗ್ರಹ ತಯಾರಿಸಿಕೊಟ್ಟರೆ ಭಾಷಾಂತರದಲ್ಲಿಯ ತೊಂದರೆ ತಪ್ಪುತ್ತದೆ. ಇದು ಬಹಳ ಮಹತ್ವದ ವಿಷಯವಾಗಿರುವುದರಿಂದ ಸರಕಾರಕ್ಕೆ ಇದನ್ನು ಬಿಟ್ಟುಬಿಡದೆ ಈ ಮಹಾ ಸಭೆಯೇ ಒಂದು ಕಮಿಟಿಯನ್ನು ಮಾಡಿ ಈ ಕೆಲಸವನ್ನು ಮಾಡಿದರೆ ಚೆನ್ನಾಗಿ ಆಗುತ್ತದೆ ಇನ್ನೊಮ್ಮೆ ಈ ಬಗ್ಗೆ ವಿಚಾರ ಮಾಡೋಣ.

ಇಲ್ಲಿಗೆ ಇಂದಿನ ಸಭೆಯ ಕಾರ್ಯಕಲಾಪವು ಮುಗಿಯಿತು. ನಾಳೆ ಮಧ್ಯಾಹ್ನ ಒಂದು ಗಂಟೆಗೆ ಇಲ್ಲಿ ಮತ್ತೆ ಕೂಡೋಣ.

The House adjourned at Eight Minutes past Six of the Clock to meet again at One of the Clock on Friday, the 9th August 1957.